ಅನುಬಂಧ

| ತಾಲ್ಲೂಕು | ಒಟ್ಟು ನ್ಯಾಯಬೆಲೆ ಅಂಗಡಿ | ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗ |
|---|---|---|
| ಬಿಜಾಪುರ | ೨೧೨ | ೪೧ |
| ಬಾಗೇವಾಡಿ | ೧೧೦ | ೪ |
| ಮುದ್ದೇಬಿಹಾಳ | ೧೩೧ | ೭ |
| ಇಂಡಿ | ೧೩೧ | ೧೧ |
| ಸಿಂಧಗಿ | ೧೭೦ | ೧೭ |
| ಜಮಖಂಡಿ | ೬೩ | ೧ |
| ಮುಧೋಳ | ೫೯ | ೪ |
| ಬಾಗಲಕೋಟೆ | ೮೨ | ೧ |
| ಬಾದಾಮಿ | ೧೬೬ | ೭ |
| ಹುನಗುಂದ | ೧೧೦ | ೧ |
| ಬೀಳಗಿ | ೫೩ | — |
| ಒಟ್ಟು | ೧೨೮೭ | ೯೪ |

## ಆರಕ್ಷಕ ಇಲಾಖೆಯಲ್ಲಿರುವ ಅಲ್ಪ ಸಂಖ್ಯಾತರು

೯೫೧. ಶ್ರೀ ಎ. ಎಂ. ಹಿಂಡಸಗೇರಿ (ಹುಬ್ಬಳ್ಳಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಲ್ಪ ಸಂಖ್ಯಾತರಿಗೆ ಸರ್ಕಾರದಲ್ಲಿ ಅದರಲ್ಲೂ ಪೋಲೀಸ್ ಇಲಾಖೆಯಲ್ಲಿ ಸರಿಯಾದ ಪ್ರಾತಿನಿಧ್ಯ ಸಿಗದಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಇದಕ್ಕೆ ಕಾರಣಗಳೇನು, ಅಲ ಸಂಖ್ಯಾತರಿಗೆ ಪೋಲೀಸ್ ಇಲಾಖೆಯಲ್ಲಿ ಸರಿಯಾದ ಪ್ರಾತಿನಿಧ್ಯ ಕೊಡಲು ಸರ್ಕಾರವು ಕೈಗೆದುಕೊಳ್ಳಲಿರುವ ಕ್ರಮವೇನು?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು)—.

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

## ದಕ್ಷಿಣ ಕನ್ನಡದಲ್ಲಿ ಸಣ್ಣ ಉಳಿತಾಯ

೯೨೫. ಶ್ರೀ ಬಿ.ಎಂ. ಇದಿನಬ್ಬ (ಉಳ್ಳಾಲ).—ಮಾನ್ಯ ಹಣಕಾಸು, ಸಣ್ಣ ಉಳಿತಾಯ ಹಾಗೂ ಬಂದೀಖಾನೆಗಳ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ದಕ್ಷಿಣ ಕನ್ನಡದಲ್ಲಿ ೧೯೮೫-೮೬, ೧೯೮೬-೮೭ನೇ ಸೆಪ್ಟೆಂಬರ್‌ವರೆಗೆ ಸಣ್ಣ ಉಳಿತಾಯದಲ್ಲಿ ಸಂಗ್ರಹವಾದ ಹಣವೆಷ್ಟು?

ಆ) ಸಣ್ಣ ಉಳಿತಾಯದಲ್ಲಿ ದಕ್ಷಿಣ ಕನ್ನಡ ಯಾವ ಸ್ಥಾನದಲ್ಲಿದೆ ?

ಇ) ಇನ್ನು ಮುಂದಕ್ಕೆ ಇನ್ನೂ ಪ್ರಗತಿಯಾಗಲು ಹೊಸ ಹೊಸ ಕಾರ್ಯಕ್ರಮಗಳನ್ನು ಏನಾದರೂ ಹಾಕಿಕೊಳ್ಳಲಾಗಿದೆಯೇ ಹಾಗಿದ್ದಲ್ಲಿ ಅದರ ವಿವರಗಳೇನು?

ಶ್ರೀ ವೀರಣ್ಣ (ಹಣಕಾಸು ಸಣ್ಣ ಉಳಿತಾಯ ಮತ್ತು ಬಂದೀಖಾನೆ ರಾಜ್ಯ ಸಚಿವರು):—

ಅ) ೧೯೮೫-೮೬ ಮತ್ತು ೧೯೮೬-೮೭ನೇ ಡಿಸೆಂಬರ್‌ವರೆಗಿನ ಸಣ್ಣ ಉಳಿತಾಯ ಸಂಗ್ರಹಣೆಯ ವಿವರ ಈ ರೀತಿ ಇದೆ,

(ರೂ. ಲಕ್ಷಗಳಲ್ಲಿ)

(ಏಪ್ರಿಲ್‌ನಿಂದ ಡಿಸೆಂಬರ್‌ವರೆವಿಗೆ)

| | ೧೯೮೫-೮೬ | ೧೯೮೬-೮೭ |
|---|---|---|
| ಒಟ್ಟಾ ಸಂಗ್ರಹಣೆ | ೧೬೪೪-೮೬ | ೨೨೪೭.೮೨ |

ಆ) ಎರಡನೇ ಸ್ಥಾನ

ಇ) ಹೌದು. ಸಣ್ಣ ಉಳಿತಾಯದಲ್ಲಿ ಹೆಚ್ಚಿನ ಪ್ರಗತಿಯನ್ನು ಸಾಧಿಸುವ ಸಲುವಾಗಿ ಸಂಘ ಸಂಸ್ಥೆಗಳು ಮತ್ತು ಜನತೆಯ ಸಹಕಾರದೊಂದಿಗೂ ಎಲ್ಲಾ ಇಲಾಖೆಗಳ ಸಹಕಾರದಿಂದ ಸಣ್ಣ ಉಳಿತಾಯ ಯೋಜನೆಯಲ್ಲಿ ಹಣ ತೊಡಗಿಸುವಂತೆ ಇಡೀ ಕರ್ನಾಟಕದಲ್ಲಿ ವ್ಯಾಪಕವಾಗಿ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

೨. ಹೆಚ್ಚು ಅಧಿಕೃತ ಏಜೆಂಟರುಗಳನ್ನು ನೇಮಿಸಿ ಅದರ ಮೂಲಕ ಹೆಚ್ಚು ಹಣ ಸಂಗ್ರಹಿಸುವಂತೆ ಮಾಡಲು ಕ್ರಮ ತೆಗೆದುಕೊಂಡಿದೆ.

೩. ಮಂಡಲ ಪಂಚಾಯಿತಿಗಳ ಮೂಲಕ ಜನತೆಗೆ ಸಣ್ಣ ಉಳಿತಾಯದ ಪ್ರಯೋಜನಗಳ ಬಗ್ಗೆ ತಿಳುವಳಿಕೆ ಮೂಡಿಸಿ ಮಂಡಲ ಪಂಚಾಯಿತಿಯ ವ್ಯಾಪ್ತಿಯಲ್ಲಿ ಉಳಿತಾಯ ಯೋಜನೆಯನ್ನು ಕಾರ್ಯಗತಗೊಳಿಸಲಾಗುತ್ತಿದೆ, ಉತ್ತಮ ಪ್ರಗತಿಯನ್ನು ಸಾಧಿಸುವ ಮಂಡಲ ಪಂಚಾಯಿತಿಗಳಿಗೆ, ಅಭಿವೃದ್ಧಿ ಕಾರ್ಯಗಳಿಗೆ ವಿನಿಯೋಗ ಮಾಡಲು ಪ್ರೋತ್ಸಾಹಕ ಧನ ಕೊಡಲು ಕ್ರಮ ತೆಗೆದುಕೊಳ್ಳಲಾಗಿದೆ.

೪. ಇಂದಿರಾ ವಿಕಾಸ ಪತ್ರಗಳ ಮತ್ತು ರಾಷ್ಟ್ರೀಯ ಉಳಿತಾಯ ಪತ್ರಗಳ ಮಾರಾಟವನ್ನು ತೀವ್ರಗೊಳಿಸಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ದಿನಾಂಕ ೧-೮-೧೯೮೬ರಿಂದ ವಿಶೇಷ ಬಹುಮಾನ ಜಾರಿಗೆ ತರಲಾಗಿದೆ.

೫. ಅಂಚೆ ಕಛೇರಿ ರಿಕರಿಂಗ್ ಡಿಪಾಜಿಟ್ ಮೂಲಕ ಹೆಚ್ಚು ಹೆಚ್ಚು ಹಣ ಸಂಗ್ರಹಿಸಲು ಮಹಿಳಾ ಪ್ರಧಾನ ಕ್ಷೇತ್ರಿಯ ಬಚತ್ ಯೋಜನೆಯಡಿಯಲ್ಲಿ ನೇಮಕಗೊಂಡ ಅಧಿಕೃತ ಏಜೆಂಟರುಗಳಿಗೆ ದಿನಾಂಕ ೧೫-೧೨-೧೯೮೬ರಿಂದ ೨೯-೨-೧೯೮೭ರ ವರೆಗೆ ಒಂದು ಬಹುಮಾನ ಸ್ಪರ್ಧೆಯನ್ನು ಏರ್ಪಡಿಸಿ ಉತ್ತಮ ಸಾಧನೆಯನ್ನು ಸಾಧಿಸಿದ ಏಜೆಂಟರುಗಳಿಗೆ ಬಹುಮಾನ ನೀಡುವ ಯೋಜನೆಯನ್ನು ಜಾರಿಗೆ ತರಲಾಗಿದೆ.

೬. ಭಾರತ ಸರ್ಕಾರದ ರಾಷ್ಟ್ರೀಯ ಉಳಿತಾಯ ಸಂಸ್ಥೆಯ ಕರ್ನಾಟಕ ಸರ್ಕಾರದ ವಾರ್ತಾ ಮತ್ತು ಪ್ರಚಾರ ಇಲಾಖೆ, ಕಲೆ ಮತ್ತು ಸಂಸ್ಕೃತಿ ಇಲಾಖೆ ಮತ್ತು ಸಣ್ಣ ಉಳಿತಾಯ ಇಲಾಖೆಗಳ ಸಹಕಾರದಿಂದ ಪ್ರತಿಯೊಂದು ತಾಲ್ಲೂಕಿನಲ್ಲಿಯೂ ಸಣ್ಣ ಉಳಿತಾಯ ಯೋಜನೆಯ ತೀವ್ರ ಪ್ರಚಾರಾಂಧೋಲನವನ್ನು ಏರ್ಪಡಿಸಿ ಆ ಮೂಲಕ ಕರ್ನಾಟಕದ ಎಲ್ಲಾ ವರ್ಗದ ಜನತೆಗೂ ಸಣ್ಣ ಉಳಿತಾಯ ಯೋಜನೆಯ ಪ್ರಯೋಜನ ಹಾಗೂ ಲಾಭಗಳ ಬಗ್ಗೆ ತಿಳುವಳಿಕೆ ಮೂಡಿಸಿ ದುಡಿಯುವ ಪ್ರತಿಯೊಂದು ಕುಟುಂಬವನ್ನು ಸಣ್ಣ ಉಳಿತಾಯ ಯೋಜನೆಯಲ್ಲಿ ಹಣ ತೊಡಗಿಸುವಂತೆ ಮಾಡಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

೭. ಭಾರತ ಸರ್ಕಾರವು ಹೊಸದಾಗಿ ತಂದಿರುವ ಪ್ರಾಸಿಕ ವರಮಾನ ಯೋಜನೆಯ ಲಾಭವನ್ನು ಜನತೆಗೆ ಅರಿವು ಮೂಡಿಸಲು ವಿಶೇಷ ಆಂಧೋಲನವನ್ನು ಹಮ್ಮಿಕೊಳ್ಳಲಾಗಿದೆ.

೮. ಭಾರತ ಸರ್ಕಾರದ ಇತ್ತೀಚಿನ ನಿರ್ಧಾರದಂತೆ ಟ್ರಸ್ಟಿಗಳು ಬ್ಯಾಂಕಿಂಗ್ ಕಂಪನಿಗಳನ್ನು, ಕಾರ್ಪೊರೇಷನ್‌ಗಳು, ಅಸೋಷಿಯೇಷನ್‌ಗಳು ಸಂಘ ಸಂಸ್ಥೆಗಳು ಮತ್ತು ಸ್ಥಳೀಯ ಸಂಸ್ಥೆಗಳ ಸಹಕಾರದಿಂದ ಸಣ್ಣ ಉಳಿತಾಯ ಯೋಜನೆಯ ಟ್ರೆಮ್ ಡಿಪಾಸಿಟ್‌ನಲ್ಲಿ ಹಣ ತೊಡಗಿಸುವ ಅವಕಾಶ ಮಾಡಿಕೊಟ್ಟಿದೆ. ಇದರ ಅಂಗವಾಗಿ ಈ ಯೋಜನೆಯ ಬಗ್ಗೆ ಮೇಲ್ಕಂಡ ಎಲ್ಲಾ ಸಂಸ್ಥೆಗಳಿಗೆ ತಿಳುವಳಿಕೆ ಕೊಡಿಸಿ, ಸಂಸ್ಥೆಗಳು ಈ ಯೋಜನೆಯಿಂದ ಲಾಭ ಪಡೆದುಕೊಳ್ಳಲು ವಿಶೇಷ ಚಳುವಳಿಯನ್ನು ರೂಪಿಸಲಾಗಿದೆ.